## ಅಪಾರ್ಟ್‌ಮೆಂಟ್..

ಒಮ್ಮೆ ನಮ್ಮ ಸಂಬಂಧಿ ಅಜ್ಜಿಯೊಬ್ಬಳಿಗೆ ದಂತಕ್ಷಯ ಉಂಟಾಗಿ ಆಸ್ಪತ್ರೆಗೆ ಹೋಗುವ ಸಂದರ್ಭ ಬಂತು. ಕರೆದುಕೊಂಡು ಹೋದೆ. ವೈದ್ಯರು ಹಲ್ಲುಗಳನ್ನೆಲ್ಲ ಪರೀಕ್ಷಿಸಿ ಶನಿವಾರ 'ಅಪಾಯಿಂಟ್‌ಮೆಂಟ್' ತಗೊಂಡು ಬನ್ನಿ ಎಂದು ಸಲಹೆ ಕೊಟ್ಟರು. ಅಜ್ಜಿ ಒಮ್ಮೆಲೆ ತಲೆ ಬಿಸಿ ಮಾಡಿಕೊಂಡವಳಂತೆ 'ಅಯ್ಯ ಶಿವನೆ! ನಮ್ಮಂಥವರಿಗೆ ಅಪಾರ್ಟ್‌ಮೆಂಟ್ ತಗೊಳ್ಳುದು ಕಷ್ಟ ಸಾಮಿ. ನಿಮ್ ದವಾಖಾನಿಗೆ ಬರುವುದಕ್ಕೂ ಅಪಾರ್ಟ್‌ಮೆಂಟ್ ತಗೊಬೇಕಾ? ಆ ಶಕ್ತಿ ನಮಗೆಲ್ಲಿ ಬರಬೇಕು? ಬ್ಯಾಡ ಬುಡ sss ಎಪ್ಪ' ಎಂದು ಹೊರ ನಡೆದಳು. ವೈದ್ಯರು ಅವಳ ಮಾತಿಗೆ ಬಿದ್ದು ಬಿದ್ದು ನಗತೊಡಗಿದರು. ನಾನು 'ಅಪಾಯಿಂಟ್‌ಮೆಂಟ್' ಅರ್ಥ ಅವಳಿಗೆ ತಿಳಿ ಹೇಳಿದ ಮ್ಯಾಲೆ ಅವಳ ತಲೆಬಿಸಿ ಇಳಿಯಿತು.



**ಶಿ.ಕಾ. ಬಡಿಗೇರ**

---

## ಜುಬ್ಬಾ ಸಾಹಿತಿ!

ಅಂಕೋಲಾದಲ್ಲಿ ಇತ್ತೀಚೆಗೆ ಒಂದು ಸಾಹಿತ್ಯಿಕ ಕಾರ್ಯಕ್ರಮ ಹಾಗೂ ಪುಸ್ತಕ ಮಾರಾಟಮೇಳ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಾನು ಪುಸ್ತಕ ಮಳಿಗೆ ತೆರೆದಿದ್ದೆ. ಎಂದಿನಂತೆ ಅಂದೂ ಜುಬ್ಬಾ ಧರಿಸಿದ್ದೆ. ವಿದ್ಯಾರ್ಥಿಗಳ ದಂಡೊಂದು ನನ್ನತ್ತ ಬಂದು ಆಟೋಗ್ರಾಫ್ ನೀಡುವಂತೆ ಕೇಳತೊಡಗಿತು. ಪ್ರಸಿದ್ಧ ಸಾಹಿತಿಗಳಿಂದ ಜನ ಆಟೋಗ್ರಾಫ್ ಪಡೆಯುವುದು ಸಹಜ. ಆದರೆ ಸಮುದ್ರ ತೀರದ ಅಂಕೋಲಾದವರೆಗೂ ನನ್ನ ಖ್ಯಾತಿ ಹಬ್ಬಿರುವುದೆಂದು ನನಗೆ ತಿಳಿದಿರಲಿಲ್ಲ. ಒಳಗೊಳಗೆ ಖುಷಿಪಡುತ್ತ ಆಟೋಗ್ರಾಫ್ ನೀಡುತ್ತ, 'ನಾನು ಸಾಹಿತಿ ಎಂದು ನಿಮಗೆ ಹೇಗೆ ತಿಳಿಯಿತು?' ಎಂದು ಪ್ರಶ್ನಿಸಿದೆ. ಅವರು, 'ನಮ್ಮ ಮೇಷ್ಟ್ರು ಹೇಳಿದಾರೆ ಸಾರ್, ಜುಬ್ಬಾ ಹಾಕ್ಕಂಡವರೇ ಸಾಹಿತಿಗಳು ಅಂತ' ಎಂದರು.



ಕಲೆ: ಗಣೇಶ ಆಚಾರ್ಯ

**ಸರ್ಜಾಶಂಕರ್ ಹರಳಿಮಠ**